كِتَابُ التَّوْحِيدِ

# ಕಿತಾಬುತ್ತೌಹೀದ್

(ಅಶ್ಶೈಖ್ ಸಾಲಿಹ್ ಅಲ್ ಉಸೈಮೀನ್, ಅಶ್ಶೈಖ್ ಸಾಲಿಹ್ ಅಲ್ ಫೌಝಾನ್ ಮುಂತಾದ ಹಿರಿಯ ವಿದ್ವಾಂಸರ ವಿವರಣೆಗಳನ್ನು ಆಧಾರವಾಗಿಟ್ಟುಕೊಂಡು ನಡೆಸಲಾದ ದರ್ಸ್)

ಭಾಗ 01

ಅಬೂ ಹಮ್ಮಾದ್ ಸಲಾಹುದ್ದೀನ್

# ಪ್ರಾಸ್ತಾವಿಕ

بِسْمِ ٱللَّهِ ٱلرَّحْمَٰنِ ٱلرَّحِيمِ

ಪರಮ ದಯಾಮಯನೂ ಕರುಣಾಮಯಿಯೂ ಆದ ಅಲ್ಲಾಹುವಿನ ನಾಮದಿಂದ,

ಸರ್ವಸ್ತುತಿಗಳೂ ಸಕಲಲೋಕಗಳ ರಬ್ಬ್ಆದ (ಪರಿಪಾಲಕನಾದ) ಅಲ್ಲಾಹುವಿಗೆ ಮೀಸಲು. ಅಂತಿಮ ವಿಜಯವು ಮುತ್ತಕೀನ್‌ಗಳಿಗಾಗಿದೆ. ಅಕ್ರಮಿಗಳ ಹೊರತು (ಇತರರ ವಿರುದ್ಧ) ವೈಷಮ್ಯವಿಲ್ಲ. ಸಜ್ಜನದಾಸರ ರಕ್ಷಕನಾದ ಅಲ್ಲಾಹುವಿನ ಹೊರತು ಅನ್ಯ ಆರಾಧ್ಯರಿಲ್ಲ ಎಂದು ನಾನು ಸಾಕ್ಷ್ಯವಹಿಸುತ್ತೇನೆ, ಮತ್ತು ಪ್ರಾಮಾಣಿಕ ಪ್ರವಾದಿಯಾದ ಮುಹಮ್ಮದ್ (صَلَّى ٱللَّهُ عَلَيْهِ وَسَلَّمَ) ರವರು ಆತನ ದಾಸರೂ ಸಂದೇಶವಾಹಕರೂ ಆಗಿರುವರೆಂದು ನಾನು ಸಾಕ್ಷ್ಯವಹಿಸುತ್ತೇನೆ. ಮುಹಮ್ಮದ್ (صَلَّى ٱللَّهُ عَلَيْهِ وَسَلَّمَ) ರವರ ಮೇಲೂ, ಅವರ ಕುಟುಂಬದವರ ಮೇಲೂ, ಅವರ ಸಹಚರರ (ಸಹಾಬಾಗಳ) ಮೇಲೂ ಹಾಗೂ ಪ್ರತಿಫಲದ ದಿನದ ತನಕ ಇಹ್ಸಾನ್‌ನೊಂದಿಗೆ ಅವರನ್ನು ಅನುಸರಿಸಿದವರ ಮೇಲೂ ಅಲ್ಲಾಹುವಿನ ಸಲಾತ್ ಮತ್ತು ಸಲಾಮ್‌ಗಳು ಇರಲಿ.

ಮುಂದುವರಿದು ಹೇಳುವುದೇನೆಂದರೆ :

ಅಲ್ಲಾಹುವಿನ ದಾಸರೇ, ಇಂದಿನಿಂದ (8 ಮುಹರ್ರಮ್, 1441 ಹಿಜರಿ ವರ್ಷ – 8 ಸೆಪ್ಟೆಂಬರ್, 2019 ರಿಂದ) ನಾವು ಕಲಿಯಲು ಆರಂಭಿಸುವ ಗ್ರಂಥವು ಶೈಖ್ ಮುಹಮ್ಮದ್ ಬಿನ್ ಅಬ್ದುಲ್ ವಹ್ಹಾಬ್ (رَحِمَهُ ٱللَّهُ) ರವರ ಪ್ರಸಿದ್ಧ ಕೃತಿಯಾದ **"ಕಿತಾಬುತ್ತೌಹೀದ್"** ಆಗಿದೆ. ಇದರ ವಿವರಣೆಗೆ ನಾನು ಸಲಫೀ ವಿದ್ವಾಂಸರ

ಗ್ರಂಥಗಳನ್ನು ಅವಲಂಬಿಸಿರುವೆನು. ವಿಶೇಷವಾಗಿ ಶ್ರೇಷ್ಠ ವಿದ್ವಾಂಸರಾದ ಶೈಖ್ ಸಾಲಿಹ್ ಅಲ್-ಉಸೈಮೀನ್ (رَحِمَهُ ٱللَّٰهُ), ಅವರಿಗಿಂತ ಮುಂಚಿನ ವಿದ್ವಾಂಸರಾಗಿದ್ದ ಇಮಾಮ್ ಅಲ್-ಅಲ್ಲಾಮಃ ಅಬ್ದುರ್ರಹ್ಮಾನ್ ನಾಸಿರ್ ಅಸ್ಸಅದೀ (رَحِمَهُ ٱللَّٰهُ), ಅದೇರೀತಿ ಶೈಖ್ ಇಬ್ನ್ ಬಾಝ್ (رَحِمَهُ ٱللَّٰهُ), ಹಾಗೂ ಪ್ರಸ್ತುತ ಕಾಲಘಟ್ಟದ ಶ್ರೇಷ್ಠ ವಿದ್ವಾಂಸರಾಗಿರುವ ಅಶ್ಶೈಖ್ ಸಾಲಿಹ್ ಅಲ್-ಫೌಝಾನ್ (حَفِظَهُ ٱللَّٰهُ) ಹಾಗೂ ಇನ್ನಿತರ ವಿದ್ವಾಂಸರ ವಿವರಣೆಗಳನ್ನು ಆಧಾರವಾಗಿರಿಸಿಕೊಂಡು ಈ ತರಗತಿಯನ್ನು ನಾನು ನಿರ್ವಹಿಸಲಿರುವೆನು.

ಕಿತಾಬುತ್ತೌಹೀದ್ ಈ ಗ್ರಂಥದ ವಿವರಣೆಯನ್ನು ಪ್ರಾರಂಭಗೊಳಿಸುವುದಕ್ಕಿಂತ ಮುಂಚಿತವಾಗಿ, ಶೈಖ್ ಸಾಲಿಹ್ ಅಲ್-ಫೌಝಾನ್ (حَفِظَهُ ٱللَّٰهُ) ರವರು ತಮ್ಮ ವಿವರಣಾ ಗ್ರಂಥವಾದ **"ಇಆನತುಲ್ ಮುಸ್ತಫೀದ್ ಬಿ ಶರ್ಹಿ ಕಿತಾಬಿತ್ತೌಹೀದ್"** ಇದರ ಮುನ್ನುಡಿಯಲ್ಲಿ ಉಲ್ಲೇಖಿಸಿದ ಕೆಲವು ವಿಚಾರಗಳನ್ನು ನಾನು ನಿಮ್ಮಮುಂದಿಡಲು ಇಚ್ಛಿಸುವೆನು.

## ಶಿರ್ಕಿನ [1] ಆರಂಭ...

ಶೈಖ್ ಸಾಲಿಹ್ ಅಲ್-ಫೌಝಾನ್ (حَفِظَهُ ٱللَّٰهُ) ಹೇಳುತ್ತಾರೆ : **"ಆದಮ್‌ರ ಸಂತತಿಯ (ಅರ್ಥಾತ್ ಮನುಷ್ಯರ) ಮೂಲವು ತೌಹೀದ್ ಆಗಿದೆ."** ಮನುಷ್ಯರು ಜನನವಾಗುವುದು ತೌಹೀದ್‌ನಲ್ಲಾಗಿದೆ. ಅವರ ಮೂಲ ಅಸ್ತಿತ್ವವೇ ತೌಹೀದ್ ಆಗಿದೆ. ಶಿರ್ಕ್ ಎಂಬುದು ಪರಕೀಯವಾದುದಾಗಿದೆ. ಅದು ಮನುಷ್ಯರಿಗೆ ಅಪರಿಚಿತವಾಗಿರುವ ವಿಷಯವಾಗಿರುತ್ತದೆ. ಇಬ್ನ್ ಅಬ್ಬಾಸ್ (رَضِيَ ٱللَّٰهُ عَنْهُمَا) ರವರು

1. ಸೃಷ್ಟಿಕರ್ತನಾದ ಅಲ್ಲಾಹುವಿನೊಂದಿಗೆ ಇತರರನ್ನು ಸಹಭಾಗಿಗಳನ್ನಾಗಿಸಿ ಆರಾಧಿಸುವುದು ಅಥವಾ ಅಲ್ಲಾಹುವಿಗೆ ಮಾತ್ರ ಸೀಮಿತವಾದ ಕಾರ್ಯಗಳಲ್ಲಿ ಇತರರನ್ನು ಭಾಗೀದಾರರನ್ನಾಗಿ ಮಾಡುವುದು.

ಹೇಳುವಂತೆ : **“ಆದಮ್ (عَلَيْهِ ٱلسَّلَامُ) ಮತ್ತು ನೂಹ್ (عَلَيْهِ ٱلسَّلَامُ) ರವರ ಮಧ್ಯೆಯಿರುವುದು ಹತ್ತು ತಲೆಮಾರುಗಳಾಗಿವೆ.”**

ಈ ಕುರಿತಂತೆ ವಿದ್ವಾಂಸರ ಅಭಿಪ್ರಾಯ ಅವರ ಮಧ್ಯೆಯಿದ್ದ ವ್ಯತ್ಯಾಸವು ಸಾವಿರ ವರ್ಷಗಳಾಗಿತ್ತು ಎಂದಾಗಿದೆ. ಅವರೆಲ್ಲರೂ ತೌಹೀದ್‌ನ (ಏಕನಾದ ಅಲ್ಲಾಹುವನ್ನು ಮಾತ್ರ ಆರಾಧಿಸಬೇಕೆಂಬ) ವಿಶ್ವಾಸದಲ್ಲಿದ್ದರು, ಅವರು ಜನಿಸಿದ್ದು ಮತ್ತು ಮರಣಹೊಂದಿದ್ದು ತೌಹೀದ್‌ನ ವಿಶ್ವಾಸದಲ್ಲಾಗಿತ್ತು. ಆದರೆ ಶಿರ್ಕ್ ಯಾವಾಗ ಪ್ರಾರಂಭವಾಯಿತೆಂದರೆ, ಶೈಖ್ ಸಾಲಿಹ್ ಅಲ್–ಫೌಝಾನ್ (حَفِظَهُ ٱللَّٰهُ) ಹೇಳುತ್ತಾರೆ :

ಭೂಮಿಯಲ್ಲಿ ಪ್ರಪ್ರಥಮವಾಗಿ ಶಿರ್ಕ್ ಆರಂಭವಾದದ್ದು ಪ್ರವಾದಿ ನೂಹ್ (عَلَيْهِ ٱلسَّلَامُ) ರವರ ಜನತೆಯಲ್ಲಾಗಿತ್ತು. ಅದು ಆರಂಭವಾದದ್ದು ಸಜ್ಜನರನ್ನು (ಸಾಲಿಹೀನ್‌ಗಳನ್ನು) ಮಿತಿಮೀರಿ ಆದರಿಸುವುದರ ಮೂಲಕವಾಗಿತ್ತು. ಅವರು ಸಜ್ಜನರ ಚಿತ್ರಗಳನ್ನು ಅಥವಾ ಮೂರ್ತಿಗಳನ್ನು ಆದರಿಸುವ ಸಲುವಾಗಿ ಅವುಗಳನ್ನು ನಿರ್ಮಿಸಿದ್ದರು ಆದರೆ ಕಾಲಕ್ರಮೇಣ ಅದು ಅವರನ್ನು ಶಿರ್ಕ್‌ನೆಡೆಗೆ ಕೊಂಡೊಯ್ಯಿತು. ಆಗ ಅಲ್ಲಾಹು ಪ್ರವಾದಿ ನೂಹ್ (عَلَيْهِ ٱلسَّلَامُ) ರವರನ್ನು (ಅವರೆಡೆಗೆ) ನಿಯೋಗಿಸಿದನು. ಹೀಗೆ ಅವರು ಆವರ ಜನತೆಗೆ ಶಿರ್ಕಿನ ತಾಕೀತನ್ನು ಮತ್ತು ತೌಹೀದಿನ (ಅಲ್ಲಾಹುವನ್ನು ಮಾತ್ರ ಆರಾಧಿಸಿರಿ–ಇದರ) ಆಮಂತ್ರಣವನ್ನು ನೀಡಿದರು. ಹೀಗೆ ನೂಹ್(عَلَيْهِ ٱلسَّلَامُ) ರವರ ನಂತರ ಬಂದ ಪ್ರವಾದಿಗಳೆಲ್ಲರೂ ಅವರ ಹಾದಿಯಲ್ಲೇ (ಶಿರ್ಕಿನ ತಾಕೀತು ಮತ್ತು ತೌಹೀದಿನ ಆಹ್ವಾನದಲ್ಲಿ) ಮುಂದುವರಿದಿದ್ದರು. ಅಲ್ಲಾಹು (سُبْحَانَهُ وَتَعَالَىٰ) ಕುರ್‌ಆನ್‌ನಲ್ಲಿ ಹೇಳಿರುವಂತೆ :

﴿وَمَآ أَرۡسَلۡنَا مِن قَبۡلِكَ مِن رَّسُولٍ إِلَّا نُوحِيٓ إِلَيۡهِ أَنَّهُۥ لَآ إِلَٰهَ إِلَّآ أَنَا۠ فَٱعۡبُدُونِ ٢٥﴾

**"ನನ್ನ ಹೊರತು ಆರಾಧನೆಗೆ ಅರ್ಹರು ಇನ್ನ್ಯಾರಿಲ್ಲ. ಆದ್ದರಿಂದ ನನ್ನನು (ಮಾತ್ರ) ಆರಾಧಿಸಿರಿ" ಎಂಬ ಸಂದೇಶ ನೀಡಲ್ಪಡದೆ ತಮಗಿಂತ ಮುಂಚಿತವಾಗಿ ಯಾವುದೇ ರಸೂಲರನ್ನೂ ನಾವು ನಿಯೋಗಿಸಿಲ್ಲ."** [2]

**ಟಿಪ್ಪಣಿ :** ಈ ಕುರಿತಂತೆ ನಾವು ತಿಳಿದುಕೊಳ್ಳಬೇಕಾಗಿರುವುದು, ಶಿರ್ಕ್ ಆರಂಭವಾಗಿದ್ದು ನೂಹ್ (عَلَيْهِ السَّلَامُ) ರವರ ಸಮುದಾಯದಲ್ಲಾಗಿತ್ತು. ಅದಕ್ಕಿರುವ ಪ್ರಮುಖ ಕಾರಣವು **ವದ್ದ್, ಸುವಾಅ್, ಯಗೂಸ್, ಯಊಕ್ ಮತ್ತು ನಸ್ರ್** ಎಂಬ ಸಜ್ಜನರನ್ನು ಆದರಿಸುವ ಸಲುವಾಗಿ ರಚಿಸಿದ ಚಿತ್ರ, ಮೂರ್ತಿಗಳಾಗಿದ್ದವು. ಅವರೆಲ್ಲರೂ (ವದ್ದ್, ಸುವಾಅ್, ಯಗೂಸ್, ಯಊಕ್ ಮತ್ತು ನಸ್ರ್) ಸಜ್ಜನದಾಸರಾಗಿದ್ದರು. ಇದನ್ನು ಇಮಾಮ್ ಬುಖಾರಿಯವರ ವರದಿಯಲ್ಲಿ ನಮಗೆ ಕಾಣಬಹುದಾಗಿದೆ : ವದ್ದ್, ಸುವಾಅ್, ಯಗೂಸ್, ಯಊಕ್ ಮತ್ತು ನಸ್ರ್ ಇವರೆಲ್ಲರೂ ಪ್ರವಾದಿ ನೂಹ್ (عَلَيْهِ السَّلَامُ)ರ ಜನತೆಯ ಸಜ್ಜನ ವ್ಯಕ್ತಿಗಳಾಗಿದ್ದರು. ಯಾವಾಗ ಅವರು ಮರಣ ಹೊಂದಿದರೋ, ಆಗ (ನೂಹ್ عَلَيْهِ السَّلَامُ ರ ಜನತೆಗೆ) ತಾವು ವಾಸಿಸುವ ಸ್ಥಳದಲ್ಲಿ ಅವರ ಮೂರ್ತಿಗಳನ್ನು ಪ್ರತಿಷ್ಠಾಪಿಸುವಂತೆ ಶೈತಾನ್ ಅವರಿಗೆ ದುಷ್ಪ್ರೇರಣೆಯನ್ನು ನೀಡಿದನು. ನಂತರ ಅವರ ನಾಮದ ಮೂಲಕ ಅವರನ್ನು ಕರೆಯಲು (ಶೈತಾನ್ ಅವರಿಗೆ ದುಷ್ಪ್ರೇರಣೆಯನ್ನು ನೀಡಿದನು), ಇದಕ್ಕಿದ್ದ ಪ್ರಾಥಮಿಕ ಕಾರಣವು ಅವರ ಸ್ಮರಣೆಯಾಗಿತ್ತು ಎಂಬುದನ್ನು ನಾವು ಕೆಲವು ರಿವಾಯತ್‌ಗಳಲ್ಲಿ (ವರದಿಗಳಲ್ಲಿ) ಕಾಣಬಹುದಾಗಿದೆ. ಈ ರೀತಿಯಾಗಿ ಅವರನ್ನು ನೆನಪಿಸುವುದರಿಂದ ನೀವೂ ಕೂಡ ಅವರಂತಾಗಲು ನಿಮಗೆ ಉತ್ತೇಜನವಾಗುವುದೆಂದೂ, ಅವರು ಮಾಹಾನ್ ವ್ಯಕ್ತಿಗಳಾಗಿರುವುದರಿಂದ ನೀವವರನ್ನು ಸ್ಮರಿಸಿರೆಂದೂ, ಅವರು ಸಜ್ಜನದಾಸರಾಗಿದ್ದರೆಂದೂ, ಹೀಗೆ ಹಲವಾರು ಒಳಿತುಗಳನ್ನು ಪ್ರದರ್ಶಿಸಿ (ಕಾಲಾನಂತರ) ಶೈತಾನ್ ಅವರನ್ನು ಕೆಡುಕಿಗೆ

2. (ಕುರ್‌ಆನ್ 21 : 25)

ಪ್ರೇರೇಪಿಸಿದನು. ಹೀಗೆ ಪ್ರಥವಾಗಿ ಅವರು ಕೇವಲ ಸ್ಮರಣೆಗಾಗಿ ಅವುಗಳನ್ನು ನಿರ್ಮಿಸಿದ್ದರು, ಅವರೆಂದಿಗೂ ಅವುಗಳನ್ನು ಆರಾಧಿಸಿರಲಿಲ್ಲ. ಅವುಗಳನ್ನು ನಿರ್ಮಿಸಿದ ಜರನು ಮರಣಹೊಂದಿ ಕಾಲಕ್ರಮೇಣ ಜನರು ಅವುಗಳನ್ನು ನಿರ್ಮಿಸುವುದಕ್ಕೆ ಇದ್ದ ಕಾರಣವನ್ನು ಮರೆತುಬಿಟ್ಟಾಗ ತದನಂತರ ಬಂದ ತಲೆಮಾರಿನ ಜನರು ಅದನ್ನು ಆರಾಧಿಸಲು ಪ್ರಾರಂಭಿಸಿದರು.

ಶೈತಾನ್ ಅವರನ್ನು ಪ್ರಥಭ್ರಷ್ಟಗೊಳಿಸಿದ್ದು ಹಂತಹಂತಗಳಲ್ಲಾಗಿತ್ತು. ಹೀಗೆ ಇದಾಗಿದ್ದು ಶಿರ್ಕ್‌ನ ಆರಂಭ. ಕುರ್‌ಆನ್‌ನಲ್ಲಿ ಅಲ್ಲಾಹು (سُبْحَانَهُ وَتَعَالَىٰ) ಹೇಳುತ್ತಾನೆ :

﴿كَانَ ٱلنَّاسُ أُمَّةً وَٰحِدَةً فَبَعَثَ ٱللَّهُ ٱلنَّبِيِّـۧنَ مُبَشِّرِينَ وَمُنذِرِينَ﴾

**"ಮಾನವರು ಒಂದೇ ಸಮುದಾಯವಾಗಿದ್ದರು. ನಂತರ ಅವರು ಭಿನ್ನರಾದಾಗ ನೈಜವಿಶ್ವಾಸಿಗಳಿಗೆ ಶುಭವಾರ್ತೆಯನ್ನು ತಿಳಿಸಲು ಮತ್ತು (ನಿಷೇಧಗಳ) ತಾಕೀತನ್ನು ನೀಡಲು ಅಲ್ಲಾಹು ಪ್ರವಾದಿಗಳನ್ನು ನಿಯೋಗಿಸಿದನು."** [3]

ಆರಂಭದಲ್ಲಿ ಮಾನವರು ತೌಹೀದ್‌ನ ವಿಶ್ವಾಸವನ್ನು ಹೊಂದಿದ್ದರು, ತದ ನಂತರ ಅವರು  ಶಿರ್ಕಿಗೆ ಪ್ರವೇಶಿಸಿದಾಗ ಅವರಿಗೆ ತಾಕೀತನ್ನು ನೀಡಲು ಅಲ್ಲಾಹು ಪ್ರವಾದಿಗಳನ್ನು ಕಳುಹಿಸಿದನು. ಅಲ್ಲಾಹುವಿನ ದಾಸರೇ, ನಾವಿಲ್ಲಿ ಅರ್ಥೈಸಿಕೊಳ್ಳಬೇಕಾಗಿರುವುದು ಪ್ರಥಮವಾಗಿ ಶೈತಾನ್ ಜನರ ಮನಸ್ಸಿನಲ್ಲಿ ಕೆಡುಕಿನ ದುಷ್ಪ್ರೇರಣೆ ನೀಡುತ್ತಾನೆ. ಆದರೆ ಯಾವಾಗ ಆ ವ್ಯಕ್ತಿಯು ಮರಣದ ಹಂತಕ್ಕೆ ತಲುಪುತ್ತಾನೋ ಅಥವಾ ಆತನಿಗಾವುದಾದರೂ ವಿಪತ್ತು ಬಾಧಿಸುವುದೋ, ಆಗ ಶೈತಾನ್ ಅವರ ಕೈಬಿಡುತ್ತಾನೆ. ಅಲ್ಲಾಹು (سُبْحَانَهُ وَتَعَالَىٰ) ಹೇಳುತ್ತಾನೆ :

---

3. (ಕುರ್‌ಆನ್ 2 : 213)

﴿ كَمَثَلِ ٱلشَّيۡطَٰنِ إِذۡ قَالَ لِلۡإِنسَٰنِ ٱكۡفُرۡ فَلَمَّا كَفَرَ قَالَ إِنِّي بَرِيٓءٞ مِّنكَ إِنِّيٓ أَخَافُ ٱللَّهَ رَبَّ ٱلۡعَٰلَمِينَ ١٦ ﴾

**"ಶೈತಾನನ ಉಪಮೆಯಂತೆ! ಕುಫ್ರ್‌ಮಾಡು (ಅವಿಶ್ವಾಸವಿಡು) ಎಂದು ಮನುಷ್ಯನೊಂದಿಗೆ ಹೇಳಿದ ಸಂದರ್ಭ. ಅವನು ಅವಿಶ್ವಾಸಿಯಾದಾಗ ಅವನು (ಶೈತಾನನು) ಹೇಳಿದನು : ಖಂಡಿತವಾಗಿಯೂ ನಾನು ನಿನ್ನಿಂದ ವಿಮುಕ್ತನಾಗಿರುವೆನು. ಖಂಡಿತವಾಗಿಯೂ ನಾನು ಸಕಲ ಲೋಕಗಳ ರಬ್ಬ್‌ಆದ ಅಲ್ಲಾಹುವನ್ನು ಭಯಪಡುತ್ತಿರುವೆನು."** [4]

ಇದು ನಮಗೆ ಸ್ಪಷ್ಟವಾಗಿ ಅರಿವಾಗುವ ವಿಷಯವಾಗಿದೆ, ಬದ್ರ್ ಯುದ್ಧದ ಸಂದರ್ಭದಲ್ಲಿ ಮುಶ್ರಿಕರು ಅಬೂ ಸುಫ್ಯಾನ್ ಸುರಕ್ಷಿತರಾಗಿ ಹಿಂತಿರುಗಿದ್ದಾರೆ ಎಂಬ ಸುದ್ದಿ ಅವರಿಗೆ ಲಭಿಸಿದಾಗ ಅವರು ಯುದ್ಧ ಮಾಡದೆ ಹಿಂತಿರುಗುವುದಾಗಿ ತೀರ್ಮಾನಿಸಿದ್ದರು, ಆ ಸಂದರ್ಭದಲ್ಲಿ ಶೈತಾನ್ ಯಾವುದೋ ಗೋತ್ರದ ನಾಯಕನಂತೆ ಮನುಷ್ಯರೂಪದಲ್ಲಿ ಪ್ರತ್ಯಕ್ಷ್ಯನಾಗಿ **"ನೀವು ಅವರೊಂದಿಗೆ ಯುದ್ಧ ಮಾಡಿರಿ, ನಿಮಗೆ ಸಹಾಯಿಯಾಗಿ ನಾನಿರುವೆನು"** ಎಂದು ಧೈರ್ಯತುಂಬಿ ಅವರಿಗೆ ದುಷ್ಪ್ರೇರಣೆ ನೀಡುತ್ತಾನೆ. ಅಲ್ಲಾಹು (سُبۡحَانَهُۥ وَتَعَالَىٰ) ಹೇಳುತ್ತಾನೆ :

﴿ وَإِذۡ زَيَّنَ لَهُمُ ٱلشَّيۡطَٰنُ أَعۡمَٰلَهُمۡ وَقَالَ لَا غَالِبَ لَكُمُ ٱلۡيَوۡمَ مِنَ ٱلنَّاسِ وَإِنِّي جَارٞ لَّكُمۡۖ فَلَمَّا تَرَآءَتِ ٱلۡفِئَتَانِ نَكَصَ عَلَىٰ عَقِبَيۡهِ وَقَالَ إِنِّي بَرِيٓءٞ مِّنكُمۡ إِنِّيٓ أَرَىٰ مَا لَا تَرَوۡنَ إِنِّيٓ أَخَافُ ٱللَّهَۚ وَٱللَّهُ شَدِيدُ ٱلۡعِقَابِ ٤٨ ﴾

4. (ಕುರ್‌ಆನ್ 59 : 16)

**“ಶೈತಾನ್ ಅವರ (ದುಷ್ಟ) ಕರ್ಮಗಳನ್ನು ಅವರಿಗೆ ಆಕರ್ಷಣೀಯಗೊಳಿಸಿ ತೋರಿಸಿದ ಸಂದರ್ಭ(ವನ್ನು ಸ್ಮರಿಸಿರಿ), (ಶೈತಾನ್) ಹೇಳಿದನು : ಈ ದಿನದಂದು (ಬದ್ರ್ ಯುದ್ಧದ ದಿನದಂದು) ಜನರಲ್ಲಿ ನಿಮ್ಮನ್ನು ಸೋಲಿಸುವವರಾರೂ ಇಲ್ಲ. ಖಂಡಿತವಾಗಿಯೂ ನಾನು ನಿಮ್ಮ ರಕ್ಷಕನಾಗಿರುವೆನು. ಆದರೆ ಯಾವಾಗ ಎರಡು ಬಣಗಳು (ಮುಸ್ಲಿಮರ ಮತ್ತು ಮುಶ್ರಿಕರ ಬಣಗಳು) ಪರಸ್ಪರ ಮುಖಾಮುಖಿಯಾಯಿತೋ, ಅವನು (ಶೈತಾನ್) ಹಿಮ್ಮೆಟ್ಟಿದನು ಮತ್ತು ಹೇಳಿದನು ‘ನಾನು ನಿಮ್ಮಿಂದ ಸಂಬಂಧ ಕಡಿದುಕೊಂಡಿರುವೆನು’. ಖಂಡಿತವಾಗಿಯೂ ನೀವು ಕಾಣದಿರುವುದನ್ನು ನಾನು ಕಾಣುತ್ತಿರುವೆನು. ಖಂಡಿತವಾಗಿಯೂ ನಾನು ಅಲ್ಲಾಹುವನ್ನು ಭಯಪಡುತ್ತಿರುವೆನು. ಶಿಕ್ಷಿಸುವುದರಲ್ಲಿ ಅಲ್ಲಾಹು ಕಠಿಣನಾಗಿರುವನು.”** [5]

ಹೀಗೆ ಶೈತಾನ್ ಯಾವಾಗಲೂ ದುಷ್ಪ್ರೇರಣೆ ನೀಡುವುದು ಹಂತಹಂತಗಳಲ್ಲಾಗಿದೆ. ಅದೇ ರೀತಿ ನಮ್ಮ ಪಿತಾಮಹ ಆದಮ್ ಮತ್ತು ಹವ್ವಾಅ್ (عَلَيْهِمُ السَّلَامُ) ರವರಿಗೆ ಶೈತಾನ್ ದುಷ್ಪ್ರೇರಣೆ ನೀಡಿದ್ದು ಇದೇ ರೀತಿಯಲ್ಲಾಗಿತ್ತು.
ಅಲ್ಲಾಹು (سُبْحَانَهُ وَتَعَالَى) ಹೇಳುತ್ತಾನೆ :

﴿ وَقَالَ مَا نَهَىٰكُمَا رَبُّكُمَا عَنْ هَٰذِهِ ٱلشَّجَرَةِ إِلَّآ أَن تَكُونَا مَلَكَيْنِ أَوْ تَكُونَا مِنَ ٱلْخَٰلِدِينَ ﴿٢٠﴾
وَقَاسَمَهُمَآ إِنِّى لَكُمَا لَمِنَ ٱلنَّٰصِحِينَ ﴿٢١﴾ ﴾

**“ಅವನು (ಶೈತಾನ್) ಹೇಳಿದನು ‘ನೀವಿಬ್ಬರೂ ಮಲಕ್‌ಗಳಾಗಿ ಬಿಡುವಿರಿ ಅಥವಾ ನೀವಿಬ್ಬರೂ ಇಲ್ಲಿ ಶಾಶ್ವತವಾಗಿ ವಾಸಿಸುವವರಾಗುವಿರಿ ಎಂಬುದರಿಂದಲೇ ವಿನಾ ನಿಮ್ಮ**

5. (ಕುರ್‌ಆನ್ 8 : 48)

**ರಬ್ಬ್ ನಿಮ್ಮನ್ನು ಈ ಮರದಿಂದ ತಡೆದಿಲ್ಲ. ಖಂಡಿತವಾಗಿಯೂ ನಾನು ನಿಮ್ಮಿಬ್ಬರ ಹಿತಾಕಾಂಕ್ಷಿಯಾಗಿರುವೆನು' ಎಂದು ಅವನು ಅವರೊಂದಿಗೆ ಹೇಳಿದನು"** [6]

ಈ ರೀತಿಯಾಗಿ ಶೈತಾನ್ ಒಳಿತನ್ನು ಪ್ರದರ್ಶಿಸಿ ತನ್ನ ಕುತಂತ್ರವನ್ನು ಪ್ರಯೋಗಿಸುತ್ತಾನೆ. ಹಾಗಾಗಿ ಈ ಕುರಿತಂತೆ ನಾವು ಬಹಳ ಜಾಕರೂಕತೆಯಿಂದಿರಬೇಕಾಗಿದೆ.

## ಪ್ರವಾದಿ ಮೂಸಾ (عَلَيْهِ السَّلَامُ) ರವರ ಜನತೆಯಲ್ಲಿ...

ಪ್ರವಾದಿ ಮೂಸಾ (عَلَيْهِ السَّلَامُ) ರವರ ಜನತೆಯಲ್ಲಿ ಶಿರ್ಕ್ ಆರಂಭವಾದದ್ದು, ಕರುವನ್ನು ಆರಾಧಿಸುವುದರ ಮೂಲಕವಾಗಿತ್ತು. ಅವರು (ಮೂಸಾ عَلَيْهِ السَّلَامُ ರ ಜನತೆ) ಅಲ್ಲಾಹುವಿನ ಅನುಗ್ರಹವನ್ನು ಕಣ್ಣಾರೆ ಕಂಡಿದ್ದರು, ಅವರಿಗೆ ಸಮಯಕ್ಕೆ ಸರಿಯಾಗಿ ಆಹಾರ ಬಂದಿಳಿಯುತ್ತಿದ್ದವು, ಅದೇರೀತಿ ಫಿರ್ಔನನ್ನು ನಾಶಗೊಳಿಸುವುದನ್ನೂ ಸಮುದ್ರವನ್ನು ಎರಡು ಪಾಲಾಗಿಸುವುದನ್ನೂ ಅಲ್ಲಾಹು ಅವರ ಕಣ್ಣಮುಂದೆ ತೋರಿಸಿಕೊಟ್ಟಿದ್ದನು, ಇವೆಲ್ಲಾ ಕಣ್ಣಾರೆ ಕಂಡನಂತರವೂ ಮೂಸಾ (عَلَيْهِ السَّلَامُ) ರವರು ತೌರಾತ್ ಗ್ರಂಥ ಲಭಿಸುವ ಅಲ್ಲಾಹುವಿನ ವಾಗ್ದಾನದ ಮೇರೆಗೆ ಅತ್ತೂರ್ ಪರ್ವತೆಡೆಗೆ ಹೋಗಿದ್ದ ವೇಳೆ ಅಲ್ಲಿ ಪ್ರವಾದಿ ಹಾರೂನ್ (عَلَيْهِ السَّلَامُ) ರವರನ್ನು ಆ ಜನರಿಗೆ ಮಾರ್ಗದರ್ಶನವನ್ನು ನೀಡಲು ನಿಯುಕ್ತಗೊಳಿಸಿದ್ದರೂ ಕೂಡ ಅವರು (ಮೂಸಾ عَلَيْهِ السَّلَامُ ರ ಜನತೆ) ಕರುವನ್ನು ಆರಾಧಿಸುವುದಾದರೆ, ಹಾಗೂ ಶಿರ್ಕ್ ನಡೆಯುವುದಾದರೆ ಇಂದಿನ ಕಾಲಘಟ್ಟದ

6. (ಕುರ್ಆನ್ 7 : 20–21)

ಅವಸ್ಥೆಯೇನಾದೀತು? ಆದುದರಿಂದ ನಾವೆಂದಿಗೂ ಶಿರ್ಕಿಗೆ ಬಲಿಯಾಗಲಾರೆವು ಎಂದು ಆತ್ಮವಿಶ್ವಾಸದಿಂದ ಹೇಳಲು ಯಾರಿಂದಲೂ ಸಾಧ್ಯವಿಲ್ಲ! ಜನರು ಯಾವ ಸಂದರ್ಭದಲ್ಲೂ ಸನ್ಮಾರ್ಗದಿಂದ ವಿಮುಖರಾಗಬಹುದು ಎಂಬುದಕ್ಕೆ ಇದೊಂದು ಸ್ಪಷ್ಟ ಪುರಾವೆಯಾಗಿದೆ.

## ಪ್ರವಾದಿ ಈಸಾ (عَلَيْهِ السَّلَامُ) ರವರ ಜನತೆಯಲ್ಲಿ...

ಪ್ರವಾದಿ ಈಸಾ (عَلَيْهِ السَّلَامُ) ರವರ ಜನತೆಯಲ್ಲಿ ಶಿರ್ಕ್ ಆರಂಭವಾದದ್ದು, ಪ್ರವಾದಿ ಈಸಾ (عَلَيْهِ السَّلَامُ) ರವರನ್ನು (ಅಲ್ಲಾಹು) ಆಕಾಶಕ್ಕೆತ್ತಿದ ಬಳಿಕವಾಗಿತ್ತು. ಪ್ರವಾದಿ ಈಸಾ (عَلَيْهِ السَّلَامُ) ರವರ ಜನತೆಯಲ್ಲಿ ಶಿರ್ಕ್ ವ್ಯಾಪಿಸಲು ಕಾರಣ ಬೂಲಸ್ (ಪಾಲ್) ಎಂಬ ಯಹೂದಿಯಾಗಿದ್ದಾನೆ. ಅವನು ಈಸಾ (عَلَيْهِ السَّلَامُ) ರವರ ಧರ್ಮವನ್ನು ಬದಲಿಸಿ ಅದಕ್ಕೆ ನವ–ನವೀನ ತತ್ವಸಿದ್ಧಾಂತಗಳನ್ನು ಸೇರಿಸಿದವನಾಗಿದ್ದಾನೆ. ಅವನು ತಾನು ಪ್ರವಾದಿ ಈಸಾ (عَلَيْهِ السَّلَامُ) ರವರ ಮೇಲೆ ವಿಶ್ವಾಸವನ್ನಿಟ್ಟವನೆಂದು ಎನ್ನುತ್ತಾ ಜನರನ್ನು ನಂಬಿಸಿದನು. ಹೀಗೆ ಅವನು ಈಸಾ (عَلَيْهِ السَّلَامُ) ರವರ ಧರ್ಮದಲ್ಲಿ ತ್ರಿಏಕತ್ವವನ್ನೂ ಶಿಲುಬೆ ಆರಾಧನೆಯನ್ನೂ, ಅದೇ ರೀತಿ ಅನೇಕ ಶಿರ್ಕಿನ ಆಚರಣೆಗಳನ್ನೂ ಹೊಸದಾಗಿ ಸೇರ್ಪಡೆಗೊಳಿಸಿದನು.

ವಾಸ್ತವವಾಗಿ ಅವನು ಪ್ರವಾದಿ ಈಸಾ (عَلَيْهِ السَّلَامُ)ರವರ ಅನುಯಾಯಿಯಾಗಿರಲಿಲ್ಲ! ಬದಲಾಗಿ ಅವನು ಈಸಾ (عَلَيْهِ السَّلَامُ) ರ ಧರ್ಮವನ್ನು ಬದಲಿಸಿ ಅದಕ್ಕೆ ನವ ಸಿದ್ಧಾಂತಗಳನ್ನು ಅಳವಡಿಸಿದವನಾಗಿದ್ದಾನೆ. ನಮಗೆಲ್ಲರಿಗೂ ತಿಳಿದಿರುವಂತೆ, ನಸಾರಾಗಳ ಧರ್ಮದಲ್ಲಿ ಮೂರು ಅಥವಾ ನಾಲ್ಕು ಪ್ರಮುಖ ವಿಶ್ವಾಸಗಳಿವೆ, (ಅವುಗಳೆಂದರೆ :)

ಮೂಲ ಪಾಪ ಸಿದ್ಧಾಂತ : ಪ್ರವಾದಿ ಆದಮ್ (عَلَيۡهِ ٱلسَّلَامُ) ಅಲ್ಲಾಹುವಿನ ಆಜ್ಞೆಯನ್ನು ಉಲ್ಲಂಘಿಸಿ ಆ ಫಲವನ್ನು ತಿಂದ ಕಾರಣದಿಂದಾಗಿ ಆದಮ್ (عَلَيۡهِ ٱلسَّلَامُ) ರವರು ಪಾಪವನ್ನೆಸಗಿದರು ಹಾಗೂ ಆ ಪಾಪದ ಹೊಣೆಯನ್ನು ಎಲ್ಲಾ ಮನುಷ್ಯರು ಹೊತ್ತುಕೊಂಡರು ಎಂದಾಗಿದೆ. – ಅದೇ ರೀತಿ – ಪಾಪವಿಮೋಚನೆ ಸಿದ್ಧಾಂತ : ಹೀಗೆ ಆದಮ್ (عَلَيۡهِ ٱلسَّلَامُ) ಎಸಗಿದ ಪಾಪಕ್ಕೆ ಪರಿಹಾರವಾಗಿ ಅಲ್ಲಾಹು ತನ್ನ ಪುತ್ರನನ್ನು ಕಳುಹಿಸಿದನು! ಮತ್ತು  ಆ ಪಾಪದ ಪರಿಹಾರವಾಗಿ ಅವರನ್ನು ಶಿಲುಬೆಗೇರಿಸಲಾಯಿತು. ಹೀಗೆ ಯಾರೆಲ್ಲಾ ಈಸಾ (عَلَيۡهِ ٱلسَّلَامُ) ರವರನ್ನು ಶಿಲುಬೆಗೇರಿಸಲಾಗಿದೆ ಮತ್ತು ಅವರದರಲ್ಲಿ ಮರಣಹೊಂದಿದ್ದಾರೆ ಎಂದು ವಿಶ್ವಾಸವಿಡುತ್ತಾರೋ ಅವರಿಗೆ ಪಾಪವಿಮೋಚನೆ ದೊರೆಯುತ್ತದೆ ಎಂದಾಗಿದೆ!. ಇದಾಗಿದೆ ನಸಾರಾಗಳ ವಿಶ್ವಾಸ! ಈ ರೀತಿಯಾಗಿ ಯಾರು ಅವರಿಗೆ ಬೋಧಿಸಿದ್ದು? ಪ್ರವಾದಿ ಈಸಾ (عَلَيۡهِ ٱلسَّلَامُ) ಆಗಿದ್ದರೇ? ಖಂಡಿತವಾಗಿಯೂ ಅಲ್ಲ!. ಇಂತಹ ವಿಶ್ವಾಸಗಳನ್ನು ಹೊಸದಾಗಿ ಹುಟ್ಟುಹಾಕಿದವರು ಈಸಾ (عَلَيۡهِ ٱلسَّلَامُ) ರವರಿಗಿಂತ ನಂತರ ಬಂದ ಜನರು ಮತ್ತು ಬೂಲಸ್ ಆಗಿದ್ದಾನೆ.  ತ್ರಿಏಕತ್ವದಂತಹ ವಿಶ್ವಾಸಗಳನ್ನು ಸೇರಿಸಿದ್ದು ನಂತರದ ಜನರಾಗಿದ್ದರು. ವಾಸ್ತವಾಗಿ ಈಸಾ (عَلَيۡهِ ٱلسَّلَامُ) ತಮ್ಮ ಜನತೆಯೊಂದಿಗೆ ಬೋಧಿಸಿದ್ದು :

﴿يَٰبَنِيٓ إِسۡرَٰٓءِيلَ ٱعۡبُدُواْ ٱللَّهَ رَبِّي وَرَبَّكُمۡۖ إِنَّهُۥ مَن يُشۡرِكۡ بِٱللَّهِ فَقَدۡ حَرَّمَ ٱللَّهُ عَلَيۡهِ ٱلۡجَنَّةَ وَمَأۡوَىٰهُ ٱلنَّارُۖ وَمَا لِلظَّٰلِمِينَ مِنۡ أَنصَارٖ ٧٢﴾

**“ಓ ಬನೀ ಇಸ್ರಾಈಲ್! ನನ್ನ ಮತ್ತು ನಿಮ್ಮ ರಬ್ಬ್ ಆದ (ಪಾಲಕಪ್ರಭುವಾದ) ಅಲ್ಲಾಹುವನ್ನು ಆರಾಧಿಸಿರಿ. ಯಾರು ಅಲ್ಲಾಹುವಿನೊಂದಿಗೆ ಶಿರ್ಕ್ (ದೇವ ಸಹಭಾಗಿತ್ವ) ಮಾಡುತ್ತಾನೋ ಅವನಿಗೆ ಅಲ್ಲಾಹು ಸ್ವರ್ಗವನ್ನು ನಿಷಿದ್ಧಗೊಳಿಸಿರುವನು, ಆತನ**

**ಅಂತ್ಯಾವಸಾನವು ನರಕವಾಗಿದೆ. ಅಕ್ರಮಿಗಳಿಗೆ ಸಹಾಯಕರಾಗಿ ಯಾರೂ ಇರಲಾರರು."**[7] ಎಂದಾಗಿತ್ತು.

ಇಬ್ನ್ ಮಸ್‌ಊದ್ (رَضِيَ ٱللَّهُ عَنْهُ) ರವರಿಂದ ವರದಿ, ಅಲ್ಲಾಹುವಿನ ರಸೂಲ್ (صَلَّى ٱللَّهُ عَلَيْهِ وَسَلَّمَ) ರವರು ಹೇಳಿದರು :

**"ತಮ್ಮ ಮಾರ್ಗವನ್ನು ಅನುಸರಿಸುವ ಮತ್ತು ತಮ್ಮ ಆಜ್ಞೆಗಳನ್ನು ಅನುಸರಿಸುವ ಸಹಚರರು ಮತ್ತು ಅನುಯಾಯಿಗಳನ್ನು ಹೊಂದಿಯೇ ವಿನಾ ನನಗಿಂತ ಮುಂಚಿತವಾಗಿ ಯಾವುದೇ ಜನತೆಗೂ ಪ್ರವಾದಿಯನ್ನು ನಿಯೋಗಿಸಲಾಗಿಲ್ಲ. ಅವರ ಬಳಿಕ ತಾವು ಮಾಡದಿರುವುದನ್ನು ಹೇಳುವ ಮತ್ತು ತಮಗೆ ಆಜ್ಞಾಪಿಸದಿರುವುದನ್ನು ಮಾಡುವ ತಲೆಮಾರುಗಳು ಬಂದವು."** [8]

ಹೀಗೆ ಜನರು ಶಿರ್ಕ್‌ಗೆ ಬಲಿಯಾಗಲು ಪ್ರಮುಖ ಕಾರಣ ತಮ್ಮ ಪ್ರವಾದಿಗಳು ಕಲಿಸಿಕೊಡದಂತಹ ನವೀನಾಚಾರಗಳನ್ನು ನಿರ್ವಹಿಸಿರುವುದಾಗಿದೆ. ಹಾಗಾಗಿ **"ಎಲ್ಲಾ ಒಳಿತುಗಳು ಅಡಕವಾಗಿರುವುದು ಸಲಫ್‌ಗಳನ್ನು (ಸಜ್ಜನ ಪೂರ್ವಿಕರನ್ನು) ಅನುಸರಿಸುವುದರಲ್ಲಾಗಿದೆ"** ಎಂಬುದನ್ನು ನಾವು ಅರ್ಥೈಸಿಕೊಳ್ಳಬೇಕಾಗಿದೆ.

ಅಲ್ಲಾಹು (سُبْحَانَهُ وَتَعَالَىٰ) ಕುರ್‌ಆನ್‌ನಲ್ಲಿ ಹೇಳುತ್ತಾನೆ :

﴿ وَرَهْبَانِيَّةً ٱبْتَدَعُوهَا مَا كَتَبْنَٰهَا عَلَيْهِمْ إِلَّا ٱبْتِغَآءَ رِضْوَٰنِ ٱللَّهِ فَمَا رَعَوْهَا حَقَّ رِعَايَتِهَا ۖ ﴿٢٧﴾ ﴾

7. (ಕುರ್‌ಆನ್ 5 : 72)
8. (ಸುನನ್ ಅಬೀ ದಾವೂದ್)

**"ಸನ್ಯಾಸತ್ವವನ್ನು ಸ್ವತಃ ಅವರೇ ಹೊಸದಾಗಿ ನಿರ್ಮಿಸಿದರು. ಅಲ್ಲಾಹುವಿನ ತೃಪ್ತಿಯನ್ನು ಗಳಿಸಲು ಅವರು ಹೀಗೆ ಮಾಡಿದರೇ ಹೊರತು ನಾವು ಅದನ್ನು ಅವರಿಗೆ ನಿಯಮವನ್ನಾಗಿ ಮಾಡಿರಲಿಲ್ಲ. ನಂತರ ಅವರದನ್ನು ಪಾಲಿಸಬೇಕಾದ ರೀತಿಯಲ್ಲಿ ಪಾಲಿಸಲೂ ಇಲ್ಲ."** [9]

**ಬನೂ ಇಸ್ಮಾಈಲ್‌ನಲ್ಲಿ (ಅರಬ್ ಜನರೆಡೆಯಲ್ಲಿ)...**

﴿مَا كَانَ إِبْرَاهِيمُ يَهُودِيًّا وَلَا نَصْرَانِيًّا وَلَٰكِن كَانَ حَنِيفًا مُّسْلِمًا وَمَا كَانَ مِنَ ٱلْمُشْرِكِينَ ﴿٦٧﴾﴾

**"ಇಬ್ರಾಹೀಮ್ (عَلَيْهِ ٱلسَّلَامُ) ರವರು ಯಹೂದಿಯೋ ಅಥವಾ ನಸ್ರಾನಿಯೋ ಆಗಿರಲಿಲ್ಲ. ಅವರು ನೈಜ ಮುಸ್ಲಿಮರಾಗಿದ್ದರು. ಮುಶ್ರಿಕರ ಪೈಕಿ ಸೇರಿದವರಾಗಿರಲಿಲ್ಲ."** [10]

ಅರಬ್ ರಾಜ್ಯಗಳಲ್ಲಿ ಶಿರ್ಕ್ ಆರಂಭವಾದದ್ದು **ಅಮ್ರ್ ಬಿನ್ ಲುಹಯ್ಯ್ ಅಲ್ ಖುಝಾಈ** ಎಂಬಾತನಿಂದಾಗಿತ್ತು. ಇಮಾಮ್ ಇಬ್ನ್ ಕಸೀರ್ (رَحِمَهُ ٱللَّهُ) ತಮ್ಮ ಗ್ರಂಥವಾದ ಅಲ್–ಬಿದಾಯತು ವನ್ನಿಹಾಯದಲ್ಲಿ ಹೇಳುತ್ತಾರೆ :

---

9. (ಕುರ್‌ಆನ್ 57 : 27)
10. (ಕುರ್‌ಆನ್ 3 : 67)

www.AbuHammaad.Com

ಅಮ್ರ್ ಬಿನ್ ಲುಹಯ್ಯ್ ಅಲ್ ಖುಝಾಈ ಶಾಮ್‌ಗೆ ಹೋಗಿದ್ದಾಗ ಅಲ್ಲಿ ವಿಗ್ರಹಗಳನ್ನು ಕಂಡನು. ಅದರ ಕುರಿತಂತೆ ಅಲ್ಲಿನ ಜನರೊಂದಿಗೆ ವಿಚಾರಿಸಿದನು, ಅದಕ್ಕವರು ಉತ್ತರಿಸಿದರು : ನಾವಿದನ್ನು ಆರಾಧಿಸುವೆವು, ನಮಗೆ ಮಳೆ ಬರದಿದ್ದಾಗ ಅಥವಾ ನಮಗೇನಾದರೂ ಸಹಾಯ ಬೇಕಾದಲ್ಲಿ ನಾವು ಇದರೊಂದಿಗೆ ಯಾಚಿಸುತ್ತೇವೆ. ಇದನ್ನು ಕೇಳಿ ಅವನು ಇದನ್ನು ನಾನು ಅರಬ್‌ಗೆ ಕೊಂಡೊಯ್ಯುವುದಾಗಿ ಹೇಳಿದನು. ಅವನು ಪ್ರಪ್ರಥವಾಗಿ **'ಹುಬಲ್'** ಎಂಬ ವಿಗ್ರಹವನ್ನು ಅರಬ್ ರಾಜ್ಯಕ್ಕೆ ತಂದನು. ಅಮ್ರ್ ಬಿನ್ ಲುಹಯ್ಯ್ ಇಬ್ರಾಹೀಮ್ (عَلَيْهِ السَّلَامُ) ರವರ ಧರ್ಮವನ್ನು ಬದಲಿಸಿದವನಾಗಿದ್ದಾನೆ. ಅವನು ಅಲ್ಲಿನ ಜನರಿಗೆ ಆ ವಿಗ್ರಹವನ್ನು ಆರಾಧಿಸುವಂತೆ ಆಜ್ಞಾಪಿಸಿದನು. ಅವನು ಆ ಊರಿನ ನಾಯಕನಾಗಿದ್ದನು ಮತ್ತು ಅಗರ್ಭ ಶ್ರೀಮಂತನಾಗಿದ್ದನು.

ಪ್ರವಾದಿ (صَلَّى ٱللَّهُ عَلَيْهِ وَسَلَّمَ) ರವರು ಹೇಳಿರುವುದಾಗಿ ಹದೀಸ್‌ನಲ್ಲಿ ಕಾಣಬಹುದಾಗಿದೆ :

**"ಸ್ವತಃ ತನ್ನ ಕರುಳುಗಳನ್ನು ನರಕಕ್ಕೆ ಎಳೆದುಕೊಂಡು ಹೋಗುತ್ತಿರುವುದಾಗಿ, ನಾನು ಅಮ್ರ್ ಬಿನ್ ಲುಹಯ್ಯ್‌ನನ್ನು ಕಂಡೆನು."** [11]

ಸಹೋದರರೇ, ಈ ರೀತಿಯಾಗಿತ್ತು ಶಿರ್ಕ್ ಸಮುದಾಯದಲ್ಲಿ ಹಂತಹಂತವಾಗಿ ಬಂದಿರುವುವುದು. ಇನ್ನು ಮುಹಮ್ಮದ್ (صَلَّى ٱللَّهُ عَلَيْهِ وَسَلَّمَ) ರವರ ಸಮುದಾಯದಲ್ಲಿ ಶಿರ್ಕ್ ಹೇಗೆ ಪ್ರಾರಂಭವಾಯಿತು ಎಂಬುದನ್ನು ನಮಗೆ ನಮ್ಮ ಉಲಮಾಗಳು ವ್ಯಕ್ತವಾಗಿ ಕಲಿಸಿಕೊಟ್ಟಿರುವರು. ಅಲ್ಲಾಹು ಅವರ ಮೂಲಕ ಈ ದೀನನ್ನು (ಇಸ್ಲಾಮ್‌ಅನ್ನು) ಸಂರಕ್ಷಿಸಿರುವನು. ಅವರು ಪ್ರವಾದಿಗಳ

11. (ಸಹೀಹ್ ಅಲ್–ಬುಖಾರೀ)

ವಾರೀಸುದಾರರಾಗಿರುವವರು. ಅದರ ಕುರಿತು ನಾವು ಮುಂದಿನ ತರಗತಿಯಲ್ಲಿ (ದರ್ಸ್‌ನಲ್ಲಿ) ಕಲಿಯೋಣ. ಶೈತಾನನ ಸರ್ವ ತಂತ್ರ–ಕುತಂತ್ರಗಳಿಂದ ಮತ್ತು ಸರ್ವ ದುರ್ಬೋಧನೆಗಳಿಂದ ನಮ್ಮನ್ನೂ ನಮ್ಮ ಕುಟುಂಬದವರನ್ನೂ ಅಲ್ಲಾಹು ಸಂರಕ್ಷಿಸಲಿ.

ಅತ್ಯುತ್ತಮವಾಗಿ ಅರಿತವನು ಅಲ್ಲಾಹುವಾಗಿದ್ದಾನೆ. ಅಲ್ಲಾಹುವಿನ ಸಲಾತ್ ಮತ್ತು ಸಲಾಮ್‌ಗಳು ನಮ್ಮ ಪ್ರವಾದಿಯವರ ಮೇಲೆ, ಅವರ ಕುಟುಂಬದವರ ಮೇಲೆ ಹಾಗೂ ಅವರ ಸಹಚರರ ಮೇಲೆ ಸದಾ ಇರಲಿ.